## 'ಸುಧಾ' ಜೊತೆಗಿನ ಓದುಗರ ಒಡನಾಟ

### ಬೆನ್ನು ತಟ್ಟಿ ಬೆಳೆಸಿದ ಪತ್ರಿಕೆ

ನಾನು ಹೈಸ್ಕೂಲಿನಲ್ಲಿದ್ದಾಗ 'ಸುಧಾ' ಪತ್ರಿಕೆಯನ್ನು ಮೊದಲು ಓದಿದ್ದು. ಮೆಡಿಕಲ್ ಕಾಲೇಜಿಗೆ ಸೇರಿದಾಗಿನಿಂದ ವೈದ್ಯನಾಗುವವರೆಗೂ ತಪ್ಪದೇ ಓದುತ್ತಾ ಬಂದೆ. ಈಗಲೂ ನನಗೆ 'ಸುಧಾ' ಓದುವುದು ಚಟವಾಗಿಬಿಟ್ಟಿದೆ.

ಕಾಲೇಜಿನಲ್ಲಿದ್ದಾಗ ಆಗಾಗ್ಗೆ 'ನಿಮ್ಮ ಪುಟ'ಕ್ಕೆ ಬರೆಯುತ್ತಿದ್ದೆ. 'ಸುಧಾ' ಅವೆಲ್ಲವನ್ನೂ ಪ್ರಕಟಿಸಿ ಸಂತೋಷ ಕೊಟ್ಟಿದೆ. ವೈದ್ಯನಾದ ಮೇಲೆ ಆರೋಗ್ಯ ಲೇಖನಗಳನ್ನು ಬರೆದೆ. ಆ ಎಲ್ಲಾ ಬರಹಗಳನ್ನು ಮುಖಪುಟ ಲೇಖನಗಳನ್ನಾಗಿ ಪ್ರಕಟಿಸಿ ಪ್ರೋತ್ಸಾಹಿಸಿದೆ.

'ಸುಧಾ' ಸಹಕಾರದಿಂದಲೇ ನಾನೀಗ ಕನ್ನಡ ವೈದ್ಯ ಸಾಹಿತ್ಯ ಲೇಖಕನಾಗಿ ಗುರುತಿಸಿಕೊಂಡಿದ್ದೇನೆ. 'ಸುಧಾ'ದಿಂದ ಬೆಳೆದಿದ್ದೇನೆ. ನಮ್ಮೆಲ್ಲರಿಂದ, ಅಂದರೆ ಸಮಸ್ತ ಕನ್ನಡಿಗರಿಂದ 'ಸುಧಾ' ಇನ್ನಷ್ಟು ಬೆಳೆಯಲಿ. ಅದರ ಹಿರಿಮೆ, ಗರಿಮೆ ಮುಗಿಲೆತ್ತರಕ್ಕೆ ಏರುತ್ತಾ ಇರಲಿ.

—ಡಾ. ಮಹಾಬಲರಾಜು ಡಿ.ಕೆ.,
ದಾವಣಗೆರೆ

### ಹೆಮ್ಮೆಯ ಓದುಗ

'ಸುಧಾ' ಅಭಿಮಾನಿ ಎಂದು ಹೇಳಿಕೊಳ್ಳಲು ಹೆಮ್ಮೆ ನನಗೆ. ಕಳೆದ ಹಲವಾರು ವರ್ಷಗಳಿಂದ ನನ್ನ ಬರಹಗಳನ್ನು ನಿಮ್ಮ ಪುಟ, ಸಮುದ್ರ ಮಥನ, ನೀವು ಕೇಳಿದಿರಿ ಅಂಕಣಗಳಲ್ಲಿ ಪ್ರಕಟಿಸುವ ಮೂಲಕ ನನ್ನನ್ನು ಲೇಖಕನನ್ನಾಗಿ ರೂಪಿಸಿದ 'ಸುಧಾ'ಗೆ ನಾನು ಸದಾ ಋಣಿ. ವಜ್ರ ಮಹೋತ್ಸವ ಸಂಭ್ರಮದಲ್ಲಿರುವ 'ಸುಧಾ' ಬೆಳೆಯಲಿ, ಇನ್ನಷ್ಟು ಬೆಳಗಲಿ.

—ಪಿ. ಜಯವಂತ ಪೈ, ಕುಂದಾಪುರ

### 'ಸುಧಾ' ಎಂಬ ಪುಳಕ



ಓದು ಬರಹ ಕಲಿತಾಗ್ಲಿಂದ
ಬಿಡದೆ ನಿನ್ನ ಓದುವೆ
ಪ್ರತಿವಾರ
ಸರಳ ಭಾಷೆಯ
ಕಥೆ ಪದ್ಯ,
ಪ್ರವಾಸ ಕಥನ
ಸಚಿತ್ರ ಲೇಖನಗಳ
ಹೊತ್ತು ತರುವ
ನಿನಗೆ ನಾನು
ಮಾರುಹೋಗಿದ್ದೇನೆ
'ನಿಮ್ಮೊಡನೆ'ಯಿಂದ
'ಸೆಲೆಬ್ರಿಟಿ'ವರೆಗೆ
ಎಲ್ಲವೂ ನನಗೆ
ಪ್ರಿಯ
ನಿನ್ನ ಜಾಣರ ಪೆಟ್ಟಿಗೆಯಲ್ಲಿ
ನಾ ಬರೆದ
ಎರಡು ಸಾಲು
ಪ್ರಕಟವಾದಾಗ
ಏನೋ ಪುಳಕ
ಸುಧಾ,
ನೀ ಬಾಳಿ ಬದುಕು
ನೂರಾರು ಕಾಲ...

—ಪದ್ಮಶ್ರೀ ಎಚ್.ಎಸ್., ಬೆಂಗಳೂರು

### ಧ್ರುವ ನಕ್ಷತ್ರ

ರಾಮಾಯಣದ ಮಹಾ ದೈವಭಕ್ತೆ ಶಬರಿ, ಪುರುಷೋತ್ತಮ ರಾಮನಿಗಾಗಿ ಹಲವು ವರ್ಷ ಕಾದಳು. ಅದೇ ರೀತಿ ಪ್ರತಿ ವಾರ ನಾನೂ 'ಸುಧಾ'ಗಾಗಿ ಕಾಯುತ್ತೇನೆ.

ನಾಡಿನ ಹಲವು ಪತ್ರಿಕೆಗಳು ಮೊಬೈಲ್ ಹಾವಳಿ ಹಾಗೂ ಓದುಗರ ನಿರಾಸಕ್ತಿಯಿಂದ ಪ್ರಸರಣ ನಿಲ್ಲಿಸಿವೆ. ಆದರೆ ಎಂಥ ಪರಿಸ್ಥಿತಿಯಲ್ಲಿಯೂ ನಮ್ಮ 'ಸುಧಾ' ಇಂದಿಗೂ ನಾಡಿನ ಸಮಸ್ತ ಓದುಗರ ಚೇತನರಶ್ಮಿಯಾಗಿ ಹೊರಹೊಮ್ಮುತ್ತಿದೆ. ಎಲ್ಲ ವಯೋಮಾನದ ಓದುಗರ ನಾಡಿಮಿಡಿತಕ್ಕೆ ಸ್ಪಂದಿಸುವ ಗುಣ 'ಸುಧಾ' ಪತ್ರಿಕೆಯದ್ದು ಎಂದರೆ ತಪ್ಪಾಗದು. ಪತ್ರಿಕಾರಂಗದ ಧ್ರುವ ನಕ್ಷತ್ರವಾಗಿ ನಿರಂತರ ಬೆಳಗುತ್ತಿರಲಿ.

—ಕುಬೇರಪ್ಪ ಎಂ. ವಿಭೂತಿ, ಹರಿಹರ

### ಕಾಡಿ ಬೇಡಿ ಓದುತ್ತಿದ್ದೆ...

ನನಗಾಗ 16ರ ಹರೆಯ. ನಮ್ಮ ಮನೆ ಪಕ್ಕ ಕಿರಾಣಿ ಅಂಗಡಿಯವರು ಕೊಂಕಣಿ ರಾಯರು. ಅಲ್ಲಿ 'ಸುಧಾ', 'ಮಲ್ಲಿಗೆ', 'ಬಾಲಮಿತ್ರ', 'ಚಂದಮಾಮ' ಮುಂತಾದ ಮ್ಯಾಗಜೀನ್‌ಗಳನ್ನು ತರಿಸುತ್ತಿದ್ದರು. ನನಗೆ ಚಿಕ್ಕಂದಿನಿಂದಲೂ ಕಥೆ ಓದುವ ಹುಚ್ಚು. ಹೀಗಾಗಿ ಅಂಗಡಿ ರಾಯರಿಂದ ಕಾಡಿ ಬೇಡಿ 'ಸುಧಾ' ತಂದು ಓದುತ್ತಿದ್ದೆ.

'ಸುಧಾ' ಅಭಿಮಾನ ಎಷ್ಟಿತ್ತೆಂದರೆ, ಚಿಕ್ಕಮ್ಮನಿಗೆ ಹೆಣ್ಣು ಮಗು ಜನಿಸಿದಾಗ 'ಸುಧಾ' ಎಂದೇ ಹೆಸರು ಇಟ್ಟರು. ಆಗಿನ ಕಾಲಕ್ಕೆ ಅದು ಹೊಸ ಹೆಸರು. ಈಗ ನನ್ನ ಮೊಮ್ಮಕ್ಕಳಿಗೂ 'ಸುಧಾ' ಇಷ್ಟ. ಪದಬಂಧ, ಹೊಸ ತಿನಿಸು, ಕ್ರಿಕೆಟ್, ಸಿನಿಮಾ ಎಲ್ಲವೂ ಇಷ್ಟ. ನನಗೀಗ ಮಾಗಿದ ವಯಸ್ಸು. ನನ್ನ 'ಸುಧಾ', ದಿನೇ ದಿನೇ ಸುಂದರಿಯಾಗುತ್ತಿರುವ ಯುವತಿ.

—ಸಾವಿತ್ರಮ್ಮ, ಶಿರಸಿ

### 'ಸಮದರ್ಶಿ' ಸಾಂಗತ್ಯ




ನಾನಾಗ ಆರನೇ ತರಗತಿ ವಿದ್ಯಾರ್ಥಿ. ಮೊದಲ ಬಾರಿಗೆ ಶಾಲೆಯಲ್ಲಿ ಭಾಷಣ ಕಾರ್ಯಕ್ರಮಕ್ಕೆ ಹೆಸರು ಕೊಟ್ಟಿದ್ದೆ. ಏನು ಮಾತಾಡಬೇಕು ಎಂದು ತಲೆಕೆಡಿಸಿಕೊಂಡಿದ್ದೆ. ಅಮ್ಮನ ಬಳಿ ಕೇಳಿದೆ. ಅವರು, 'ಸುಧಾ ಪತ್ರಿಕೆ ನೋಡು. ಅದರಲ್ಲಿ ವಾರದಿಂದ ವಾರಕ್ಕೆ ಅಂತ ಇರುತ್ತೆ. ಅದನ್ನು ಓದು. ನಿನಗೆ ಬೇಕಾದಷ್ಟು ವಿಷಯ ಸಿಗುತ್ತದೆ' ಎಂದು ಹೇಳಿದರು. 'ಸುಧಾ' ಹಿಂದಿನ ವರ್ಷವಷ್ಟೇ ಪ್ರಾರಂಭವಾಗಿ ನಮ್ಮ ಮನೆಯಲ್ಲಿ ಎಲ್ಲ ಸಂಚಿಕೆಗಳೂ ಇದ್ದವು. ಸಮದರ್ಶಿ ಎಂಬುವವರು ಬರೆಯುತ್ತಿದ್ದ ಈ ಕಾಲಂನಲ್ಲಿ ಸಾಕಷ್ಟು ಮಾಹಿತಿ ಸಿಕ್ಕಿತು. ಶಾಲೆಯಲ್ಲಿ ಮೊದಲ ಭಾಷಣ ಮಾಡಿದೆ. ಅಷ್ಟೇ ಅಲ್ಲ, ಪತ್ರಿಕೆಯಲ್ಲಿ ದೊಡ್ಡ ದೊಡ್ಡ ಲೇಖನಗಳನ್ನು ಓದಲು ಶುರು ಮಾಡಿದ್ದೂ ಅದೇ ಮೊದಲು. ಅಲ್ಲಿಂದೀಚೆಗಿನ 60 ವರ್ಷಗಳಲ್ಲಿ 'ಸುಧಾ' ನನಗೆ ಅಚ್ಚುಮೆಚ್ಚು.

ನಾನು ಶಾಶ್ವತ ಚಂದಾದಾರ. ಬಹುಶಃ ಎಲ್ಲ ಸಂಚಿಕೆಗಳನ್ನೂ ಓದಿದ್ದೇನೆ. ಕಾಲ ಬದಲಾದಂತೆ 'ಸುಧಾ'ಳ ಶೈಲಿ, ಪುಟ ವಿನ್ಯಾಸ ಬದಲಾಗಿದೆ.

ಸಮದರ್ಶಿ ಹೆಸರಿನಲ್ಲಿ ಬರೆಯುತ್ತಿದ್ದವರು ಪ್ರಸಿದ್ಧ ಅಂಕಣಕಾರ ಎಚ್ಚೆಸ್ಕೆಯವರು. ಬ್ಯಾಂಕ್ ಉದ್ಯೋಗಕ್ಕೆ ಸೇರಿದ ಮೇಲೆ ಎಚ್ಚೆಸ್ಕೆಯವರ ನೇತೃತ್ವದಲ್ಲಿ ನಡೆದ ಮೊದಲ ಬ್ಯಾಂಕಿಂಗ್ ಕಮ್ಮಟದಲ್ಲೂ ಭಾಗಿಯಾಗುವ ಅವಕಾಶ ನನಗೆ ದೊರೆತದ್ದು ವಿಶೇಷ. 'ಸುಧಾ' ಮೂಲಕ ನನಗೆ ಅವರು ಆತ್ಮೀಯ ಗುರುಗಳಾದರು.

ಒಮ್ಮೆ ಊರಿಗೆ ಹೋಗುವಾಗ ಆಕಸ್ಮಿಕವಾಗಿ ಬಸ್ಸಿನಲ್ಲಿ ಭೇಟಿಯಾದ ಅವರನ್ನು ಊರಿನ ನಮ್ಮ ಮನೆಗೆ ಕರೆದುಕೊಂಡು ಹೋದಾಗ, 'ಸುಧಾ' ಪ್ರೇಮಿಯಾದ ನನ್ನ ಅಮ್ಮನಲ್ಲೂ ಧನ್ಯತಾಭಾವ ಮೂಡಿತ್ತು.

—ಶೃಂಗೇಶ್ವರ ಶರ್ಮ ಎಸ್.